ಮೂಲ ದಾವಾ ನಂಃ 116/2015

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **27-08-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎಸ್.ಬಿ ವಕೀಲರಿಂದಃ**

ಸಾಲ್ಕೋಡ ಗ್ರಾಮದಲ್ಲಿರುವ ಆಸ್ತಿಯ ದೇಖರೇಖಿಯನ್ನು ನನ್ನ ತಂದೆಯವರು ನೋಡಿಕೊಂಡು ಬಂದಿರುತ್ತಾರೆ. ನನ್ನ ತಂದೆಯವರ ಪಾಲಿಗೆ ಬಂದಂತಹ ಆದಾಯವನ್ನು ಅವರೇ ತೆಗೆದುಕೊಂಡಿರುತ್ತಾರೆ. ಸಾಲ್ಕೋಡ ಗ್ರಾಮದ ಆಸ್ತಿಯ ಆದಾಯವು ಎಷ್ಟಿತ್ತು ಎಂಬುದನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಸ್ವತ್ತಿನಲ್ಲಿ ಎಷ್ಟು ಕ್ವಿಂಟಾಲ್ ಅಡಿಕೆಯನ್ನು ಬೆಳೆಯುತ್ತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆಯವರು ಸಾಲ್ಕೋಡ ಗ್ರಾಮದ ಆಸ್ತಿಯನ್ನು ಮಾರಾಟ ಮಾಡುವವರೆಗೂ ಅದರ ಆದಾಯವನ್ನು ಅನುಭವಿಸಿದ್ದಾರೆ.

ಶಿರಸಿಯಲ್ಲಿ ನನ್ನ ತಂದೆಯವರು ಜಮೀನನ್ನು ಖರೀದಿ ಮಾಡಿದ್ದು ಇರುವುದಿಲ್ಲ. ಶಿರಸಿಯಲ್ಲಿ ನನ್ನ ತಾಯಿಯವರಿಗೆ ಜಮೀನು ಇದ್ದು, ಅದು ನನ್ನ ತಂದೆಯವರಿಗೆ ಸಂಬಂಧಪಟ್ಟಿದ್ದಾಗಿರುವುದಿಲ್ಲ. ಸುಮಾರು 10 ವರ್ಷಗಳ ಹಿಂದೆ ನನ್ನ ತಾಯಿಯು ಶಿರಸಿಯಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದಾರೆ. ನನ್ನ ತಾಯಿ ಶಿಕ್ಷಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಿರಸಿಯಲ್ಲಿರುವ ಆಸ್ತಿಯನ್ನು ನನ್ನ ತಾಯಿ ಸಾಲ ಮಾಡಿ ಖರೀದಿ ಮಾಡಿದ್ದಾರೆ. ನನ್ನ ತಾಯಿಯು ಸಾಲ ಮಾಡಿದ ಬಗ್ಗೆ ದಾಖಲೆಗಳು ಅವರ ಹತ್ತಿರ ಇರಬಹುದು. ನನ್ನ ತಾಯಿಯ ಆರೋಗ್ಯದ ಸ್ಥಿತಿ ಚೆನ್ನಾಗಿಯೇ ಇದೆ.

ಸದರಿ ಸಾಲ್ಕೋಡ ಹಾಗೂ ಶಿರಸಿ ದಾವಾ ಆಸ್ತಿಗಳ ಕುರಿತು ಹೆಚ್ಚಿನ ಮಾಹಿತಿ ನನ್ನ ತಾಯಿಗಿದೆ ಎಂದರೆ ಸರಿಯಲ್ಲ. ನನ್ನ ತಾಯಿಯು ಸಾಲ್ಕೋಡ ಗ್ರಾಮದ ದಾವಾ ಸ್ವತ್ತಿನ ಆದಾಯದಿಂದಲೇ ಶಿರಸಿಯಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿಯು ಟೀಚರ್ ಆಗಿದ್ದರಿಂದ , ಆ ಆದಾಯದ ಮೂಲದಲ್ಲಿ ಶಿರಸಿಯಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂಬುದಾಗಿ ನುಡಿದಿದ್ದಾರೆ. ನನ್ನ ತಾಯಿಯ ವೇತನ ಮತ್ತು ಖರ್ಚಿನ ಬಗ್ಗೆ ನನಗೆ ಹೇಳಲು ಆಗುವುದಿಲ್ಲ.

ನನ್ನ ತಾಯಿಯು ನ್ಯಾಯಾಲಯದ ಮುಂದೆ ಬಂದು ಸಾಕ್ಷಿ ಹೇಳಿದರೇ ಸತ್ಯ ಹೊರಬರುತ್ತದೆ , ಹಾಗೂ ಶಿರಸಿಯ ಆಸ್ತಿಯು ಸಹ ಒಟ್ಟು ಕುಟುಬಂದ ಆಸ್ತಿ ಆಗುತ್ತದೆ ಎಂದು ಮರೆಮಾಚಲು ನಾನು ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ಹೊನ್ನಾವರದಲ್ಲಿ ವಾಸವಿದ್ದು , ನನ್ನ ತಾಯಿಯು ಶಿರಸಿಯಲ್ಲಿ ವಾಸವಿದ್ದಾರೆ. ನನ್ನ ತಂದೆಯವರು ಆಸ್ತಿಯನ್ನು ಅನುಭವಿಸುವ ಸಲುವಾಗಿ ಹೊನ್ನಾವರಕ್ಕೆ ಬರುತ್ತಿದ್ದರು. ನನ್ನ ತಂದೆ-ತಾಯಿಯು ಬೇರೆ ಆಗಿದ್ದು ಇರುವುದಿಲ್ಲ , ಆದರೆ ಒಟ್ಟಿಗೆ ಇದ್ದರು.

ನನ್ನ ತಂದೆ ತಾಯಿಯ ವ್ಯವಹಾರ ಪ್ರತ್ಯೇಕ ಪ್ರತ್ಯೇಕವಾಗಿತ್ತು. ಸದರಿ ಅಂಶವನ್ನು ರುಜುವಾತುಪಡಿಸಲು ಅವರ ಬ್ಯಾಂಕ್ ಖಾತೆಗಳಿದ್ದು , ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇದ್ದದ್ದು ಇರುವುದಿಲ್ಲ.

ಸಾಲ್ಕೋಡ ಗ್ರಾಮದ ಆಸ್ತಿಯ ಆದಾಯದಿಂದ ನನ್ನ ತಂದೆಯು ಶಿರಸಿಯಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಶಿರಸಿಯಲ್ಲಿರುವ ಆಸ್ತಿಯನ್ನು ನನ್ನ ತಾಯಿಯು ಖರೀದಿ ಮಾಡಿರುವ ಬಗ್ಗೆ ಸದರಿ ಸ್ವತ್ತು ನನ್ನ ತಾಯಿ ಹೆಸರಿನಲ್ಲಿದೆ.

ಸಾಲ್ಕೋಡ ಗ್ರಾಮದ ಆಸ್ತಿಯನ್ನು ನನ್ನ ತಂದೆಯವರು ಮಾರಾಟ ಮಾಡಿದ ಇಸ್ವಿ ನನಗೆ ಗೊತ್ತಿಲ್ಲ. ಆದರೆ ಸರ್ವೇ ನಂಬರ್ 336 ಹಿಸ್ಸಾ 10 ಹಾಗೂ ಸರ್ವೇ ನಂಬರ್ 339 ಹಿಸ್ಸಾ 15 ನ್ನು ಮಾರಾಟ ಮಾಡಿದ್ದಾರೆ. ನನ್ನ ತಂದೆಯವರು ಎಷ್ಟು ಸರ್ವೇ ನಂಬರಗಳನ್ನು ಮಾರಾಟ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ನಮಗೆ ಹೇಳಿದಂತೆ ನಾವು ಮಾರಾಟ ಮಾಡುವ ಕಾಲಕ್ಕೆ ಸಹಿಯನ್ನು ಹಾಕಿದ್ದೇವೆ. ಸಾಕ್ಷಿಯು ದಿನಾಂಕಃ 27.01.2015 ರ ಕ್ರಯ ದಸ್ತಾವೇಜಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಯನ್ನು ನಿಪಿ.9 ಎಂದು, ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಪಿ.9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದಿನಾಂಕಃ 27.01.2015 ರ ಕ್ರಯ ದಸ್ತಾವೇಜಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಯನ್ನು ನಿಪಿ.10 ಎಂದು, ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಪಿ.10 ಎ ಎಂದು ಗುರುತಿಸಲಾಯಿತು. ನನ್ನ ತಂದೆಯವರು ಸಹಿ ಮಾಡು ಎಂದು ಹೇಳಿದ್ದರಿಂದ , ನಾನು ನಿಪಿ.9 ಮತ್ತು ನಿಪಿ.10 ಕ್ಕೆ ಸಹಿಯನ್ನು ಹಾಕಿರುತ್ತೇನೆ. ನಿಪಿ.9 ಮತ್ತು ನಿಪಿ.10 ರ ದಾಖಲೆಗಳನ್ನು ನಾನು ಓದಿ ನೋಡಿದ್ದು ಇರುವುದಿಲ್ಲ.

ನನ್ನ ತಂದೆಯವರು ಮಾರಾಟ ಮಾಡಿದ ಆಸ್ತಿಗಳ ಬಗ್ಗೆ ಚೌಕಾಶಿ ಮಾಡಿ ನಾನು ಸಾಕ್ಷಿ ನುಡಿಯಲು ಬಂದಿಲ್ಲ , ಆದರೆ ನನಗೆ ಗೊತ್ತಿರುವಷ್ಟದ್ದನ್ನು ಹೇಳಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುವ ಕಾಲಕ್ಕೆ ಯಾವ ಯಾವ ಸ್ಥಳಗಳನ್ನು ನನ್ನ ತಂದೆಯವರು ಮಾರಾಟ ಮಾಡಿದ್ದರು ಎಂಬುದನ್ನು ಚೌಕಾಶಿ ಮಾಡಿದ್ದು ಇರುವುದಿಲ್ಲ. ಮಾರಾಟ ಮಾಡಿದ ಸ್ವತ್ತುಗಳಲ್ಲಿ ನನ್ನ ತಂದೆಯವರಿಗೆ ನಮ್ಮ ಅಜ್ಜನ ಕಾಲದಿಂದ ಆಸ್ತಿ ಬಂದ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಂದೆಯವರು ಉದಾಹರಣೆಯಲ್ಲಿ ಸಲ್ಲಿಸಿದ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯು ಸಾಲ್ಕೋಡ ಗ್ರಾಮದಲ್ಲಿ ನಾವು ಮಾರಾಟ ಮಾಡಿದ ಆಸ್ತಿಯಲ್ಲಿ ಪಾಲನ್ನು ಕೇಳಿದ್ದಾರೆ.

ವಾದಿಯು ಸರ್ವೇ ನಂಬರ್ 336 ಹಿಸ್ಸಾ 10 , ಸರ್ವೇ ನಂಬರ್ 339 ಹಿಸ್ಸಾ 15 , ಸರ್ವೇ ನಂಬರ್ 335 ರಲ್ಲಿ ಪಾಲನ್ನು ಕೇಳಿರಬಹುದು. ವಾದಿಗೆ ಅವರ ತಂದೆಯ ಆಸ್ತಿಯಲ್ಲಿ ನಮ್ಮ ತಂದೆಗೆ ಬಂದಂತಹ ಪಾಲಿನಷ್ಟೇ ಆಸ್ತಿ ಬಂದಿರಬಹುದು. ವಾದಿಯು ಅವರ ತಂದೆಯ ಹಕ್ಕಿನ ಆಸ್ತಿಯಲ್ಲಿ ಪಾಲನ್ನು ಕೇಳಿದ್ದಾಳೆಯೇ ಹೊರತು , ಇನ್ನೊಬ್ಬರ ಆಸ್ತಿಯಲ್ಲಿ ಪಾಲನ್ನು ಕೇಳಿಲ್ಲ ಎಂದರೆ ಸರಿ .

ವಾದಿಯು ಅವರ ತಂದೆಯ ಆಸ್ತಿಯಲ್ಲಿ ಕೇಳಿದಂತಹ ಪಾಲನ್ನು ಕೊಡಲು ನನ್ನ ಆಕ್ಷೇಪಣೆ ಇರುವುದಿಲ್ಲ. ವಾದಿಯ ತಂದೆಗೆ ಅವರ ತಂದೆಯಿಂದ ಯಾವ ಯಾವ ಆಸ್ತಿಗಳು ಬಂದಿದ್ದವು ಎಂಬುದನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ದಾವಾದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಅವರ ತಂದೆಯ ಆಸ್ತಿಯಲ್ಲಿ ಹಕ್ಕಿದ್ದರೂ ಸಹ ಹಕ್ಕಿಲ್ಲ ಎಂಬುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.